# ಸೂತಕದ ಕಾಲದಲ್ಲಿ ದುರಭಿಮಾನದ ಬೆಂಕಿ

**ದರ್ಶನ್ ಅವರಿಗೆ ಅವಮಾನ ಎಸಗಲು ಕಿಡಿಗೇಡಿಯೊಬ್ಬ ನಡೆಸಿದ ಪ್ರಯತ್ನ ಖಂಡನೀಯ. ಅಂಥ ಪ್ರಯತ್ನಗಳಿಂದ ಯಾರ ವರ್ಚಸ್ಸೂ ಹೆಚ್ಚಾಗುವುದಿಲ್ಲ, ಕುಗ್ಗುವುದೂ ಇಲ್ಲ. ಈ ಪ್ರಕರಣವನ್ನು ಖಂಡಿಸುವುದರ ಜೊತೆಗೆ, ದುರಭಿಮಾನಿಗಳಿಗೆ ವಿವೇಕ ತುಂಬುವ ಕೆಲಸವನ್ನೂ ಕಲಾವಿದರು ಮಾಡಬೇಕಾಗಿದೆ.**



**■ ವಿಶಾಖ ಎನ್.**

ಲಿಯೊನೆಲ್ ಮೆಸ್ಸಿ ಅರ್ಜೆಂಟೀನಾಕ್ಕೆ ಮೊನ್ನೆ ಮೊನ್ನೆ ಫುಟ್‌ಬಾಲ್ ವಿಶ್ವಕಪ್ ದಕ್ಕಿಸಿಕೊಟ್ಟರಲ್ಲ; ಆಗ ಅವರ ವ್ಯಕ್ತಿತ್ವ ಕಟ್ಟಿಕೊಡುವ ಅಸಂಖ್ಯ ಸಣ್ಣಪುಟ್ಟ ವಿಡಿಯೊಗಳು ಹರಿದಾಡಿದವು. ಒಂದು ವಿಡಿಯೊ ಬಹಳ ಅಪರೂಪದ್ದು. ಅವರು ತಂಡದ ವ್ಯವಸ್ಥಾಪಕ ಸಮಿತಿಯ ಜತೆ ಭದ್ರತೆಯ ನಡುವೆ ಸಾಗುತ್ತಿರುತ್ತಾರೆ. ಪುಟ್ಟ ಬಾಲಕನೊಬ್ಬ ಅವರ ಝಲಕ್‌ಗಾಗಿ ಮುನ್ನುಗ್ಗಲು ವಿಫಲಯತ್ನ ನಡೆಸುತ್ತಾನೆ. ಆಗ ಭದ್ರತೆಯವರು ಅವನನ್ನು ಪಕ್ಕಕ್ಕೆ ಕಳುಹಿಸುತ್ತಾರೆ. ಆ ಕ್ಷಣವೇ ಅವನ ಕಣ್ಣಲ್ಲಿ ನೀರು. ಮೆಸ್ಸಿ ತಕ್ಷಣವೇ ಅನತಿ ದೂರದಲ್ಲೇ ಇದ್ದ ಆ ಬಾಲಕನನ್ನು ಭದ್ರತಾ ಸಿಬ್ಬಂದಿಗೇ ಹೇಳಿ, ತಮ್ಮ ಬಳಿಗೆ ಕರೆಸಿಕೊಳ್ಳುತ್ತಾರೆ. ಬಾಲಕನ ಕಣ್ಣೀರು ಮರುಕ್ಷಣವೇ ಆನಂದಭಾಷ್ಪವಾಗಿ ಬದಲಾಗುತ್ತದೆ.

ಅಭಿಮಾನ ನಿಭಾಯಿಸುವುದು, ಖುದ್ದು ಅಭಿದಾನಿಯಾಗಿರುವುದು ದೊಡ್ಡ ವಿಷಯ. ಜನಪ್ರಿಯರಾದವರು ಅಭಿಮಾನಿಗಳ ವ್ಯಾಪ್ತಿ ಹಿಗ್ಗಿದಷ್ಟೂ ಅದನ್ನು ನಿಭಾಯಿಸುವ ವಿವೇಕವನ್ನೂ ರೂಢಿಸಿಕೊಳ್ಳಬೇಕಾಗುತ್ತದೆ. ಅಣ್ಣಾವ್ರು ಎಂದೇ ನಾಡಿನ ಹಲ ದಿಕ್ಕುಗಳಿಂದಲೂ ಕರೆಸಿಕೊಂಡ ರಾಜ್‌ಕುಮಾರ್, ಬರೀ ನಟನಾಗದೆ ಸಾಂಸ್ಕೃತಿಕ ರೂಪಕವಾಗಿ ಎಲ್ಲರ ಹೃದಯದಲ್ಲಿ ಉಳಿದದ್ದು ಆ ವಿವೇಕದಿಂದಲೇ. ‘ಅಭಿಮಾನಿ ದೇವರುಗಳು’ ಎನ್ನುವ ಅವರ ಸಂಬೋಧನೆಯಲ್ಲಿಯೇ, ಜನಪ್ರಿಯತೆಯನ್ನು ನಿಸೂರಾಗಿ ನಿಭಾಯಿಸಬಲ್ಲ ಹೃದಯವಂತ ಇಣುಕಿದ್ದು.

ರಾಜ್‌ಕುಮಾರ್ ತೀರಿಹೋದ ಮೇಲೆ ಬೆಂಗಳೂರಿನ ಬಸವನಗುಡಿಯ ಮೈದಾನದಲ್ಲಿ ಶ್ರದ್ಧಾಂಜಲಿ ಭಾಷಣ ಮಾಡಿದವರಲ್ಲಿ ಸಾಹಿತಿ ಗಿರೀಶ ಕಾರ್ನಾಡರು ಪ್ರಮುಖರು. ರಾಜ್‌ಕುಮಾರ್ ಇಡೀ ನಾಡಿನಲ್ಲಿ ಒಂದು ಅಚ್ಚುಕಟ್ಟಾದ ಕನ್ನಡದ ಡಿಂಡಿಮವನ್ನು ಹೇಗೆ ಮೊಳಗಿಸಿದರು, ಭಾಷೆಯ ಹಣತೆಯನ್ನು ಹೇಗೆ ಹಚ್ಚಿಟ್ಟರು ಎನ್ನುವುದನ್ನು ಸರಳವಾಗಿಯೂ, ಸಾಹಿತ್ಯದ ಯಾವ ಪರಿಭಾಷೆಯ ಭಾರವಿಲ್ಲದೆಯೂ ಕಾರ್ನಾಡರು ಹೇಳಿದ್ದರು. ಅಂತಹ ರಾಜ್‌ಕುಮಾರ್ ಮಗನಾಗಿದ್ದುಕೊಂಡು, ಪುನೀತ್ ದಿಢೀರನೆ ವರ್ಷದ ಹಿಂದೆ ಅಗಲಿದಾಗ ಕವಿದ ನಿರ್ವಾತದಲ್ಲೂ ಅಭಿಮಾನಿಗಳ ಮೌನ ದೊಡ್ಡ ಮಾತಾಡಿತು. ಅಲ್ಲಿ ಕಂಡದ್ದೂ ರಾಜ್‌ಕುಮಾರ್ ಹಚ್ಚಿಟ್ಟುಹೋಗಿದ್ದ ಕನ್ನಡ ವಿವೇಕದ ಹಣತೆ. ಅಭಿಮಾನಿಗಳ ಹುಂಬತನದ ಅಂಧಕಾರವನ್ನು ಇಂತಹ ಹಣತೆಗಳೇ ನೀಗಬೇಕು.

ಈಗ ಅಂಧಕಾರವೊಂದು ಎದ್ದುಕಾಣುತ್ತಿದೆ. ನಟ ದರ್ಶನ್ ಹೊಸಪೇಟೆಯಲ್ಲಿ ‘ಕ್ರಾಂತಿ’ ಸಿನಿಮಾ ಪ್ರಚಾರಕ್ಕೆ ಹೋಗಿದ್ದಾಗ, ಪ್ರೇಕ್ಷಕವೃಂದದಿಂದ ಯಾರೋ ಒಬ್ಬರು ಚಪ್ಪಲಿ ತೂರಿದರು. ಅದನ್ನು ದರ್ಶನ್ ಅನುಭವಿಸಿಯೂ, ‘ಪರವಾಗಿಲ್ಲ’ ಎನ್ನುವಂತೆ ತಲೆಯಾಡಿಸಿದರು. ಅದಕ್ಕೂ ಮೊದಲು ಆ ಸಮಾರಂಭ ನಡೆಯುವ ಸ್ಥಳದ ಹೊರಗೆ ಹಾಕಿದ್ದ ದರ್ಶನ್ ಫ್ಲೆಕ್ಸ್‌ಗಳನ್ನು ಪುನೀತ್ ಅಭಿಮಾನಿಗಳು ಎಂದು ಭಾವಿಸಲಾದವರು ಹರಿದುಹಾಕಿದ್ದರು.

‘ಅಭಿಮಾನ ಎಂಥದ್ದು ಅನ್ನುವುದನ್ನು ಸತ್ತಮೇಲೆ ತೋರಿಸುವುದಿದೆ. ಉದಾಹರಣೆಗೆ ಪುನೀತ್ ರಾಜ್‌ಕುಮಾರ್ ಅವರ ಮೇಲಿನ ಅಭಿಮಾನ ನೋಡಿರಬಹುದು.

ಆದರೆ, ನನಗೆ ಬದುಕಿರುವಾಗಲೇ ಅಭಿಮಾನ ಏನು ಅನ್ನುವುದನ್ನು



